
ಕಾಲೇಜು ವಿದ್ಯಾರ್ಥಿಗಳಿಗಾಗಿ ಮೈಸೂರಿನ ಶ್ರೀರಾಮಕೃಷ್ಣ ಆಶ್ರಮವು ನಡೆಸಿದ ವ್ಯಕ್ತಿತ್ವ ನಿರ್ಮಾಣ ಶಿಬಿರದಲ್ಲಿ ನೇರವಾಗಿ ಯುವಕರಿಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಯುವಕರ ಪ್ರತಿಕ್ರಿಯೆ ಏನು ಎಂಬುದನ್ನು ತಿಳಿಯುವ ಉದ್ದೇಶದಿಂದ ಅವರಿಗೆ ಒಟ್ಟು ಹತ್ತು ಪ್ರಶ್ನೆಗಳನ್ನು ಕೇಳಲಾಯಿತು. ಅವರಿಂದ ಬಂದ ಉತ್ತರಗಳಲ್ಲಿ ಕೆಲವು ಆಯ್ದ ಉತ್ತರಗಳನ್ನು ಯುವ ವೇದಿಕೆಯಲ್ಲಿ ಕಂತುಗಳಲ್ಲಿ ಪ್ರಕಟಿಸಲಾಗುವುದು. ಈ ಸಂಚಿಕೆ ಮತ್ತು ಮುಂದಿನದರಲ್ಲಿ ಮೊದಲನೆಯ ಪ್ರಶ್ನೆಯ ಉತ್ತರಗಳನ್ನು ಪ್ರಕಟಿಸಲಾಗುತ್ತಿದೆ.




## ಇಂದಿನ ಶಿಕ್ಷಣ ಪದ್ಧತಿಯಲ್ಲಿ ಬದಲಾವಣೆ ಅಗತ್ಯವೆ? ಹಾಗಾದರೆ ಎಂಥ ಬದಲಾವಣೆ ಅಗತ್ಯ?

**ಹೌದು,** ಇಂದಿನ ಶಿಕ್ಷಣ ಪದ್ಧತಿಯಲ್ಲಿ ಬದಲಾವಣೆ ಖಂಡಿತ ಅಗತ್ಯ. ಈಗಿನ ಶಿಕ್ಷಣದ ಪ್ರಮುಖ ಉದ್ದೇಶ ಪರೀಕ್ಷೆಗಳನ್ನು ಪಾಸ್ ಮಾಡುವುದು, ರ್‍ಯಾಂಕ್ ಗಳಿಸುವುದು ಇಷ್ಟಕ್ಕೇ ಸೀಮಿತವಾಗಿದೆ. ಇದರಿಂದ ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕ ಭಾವನೆ ಹೆಚ್ಚಾಗುತ್ತಿದೆಯೇ ಹೊರತು ವಿದ್ಯಾರ್ಥಿಯು ಜ್ಞಾನಾರ್ಜನೆ ಮಾಡುವ ದೃಷ್ಟಿಯಿಂದ ಓದುತ್ತಿಲ್ಲ.

ಶಿಕ್ಷಣ ಪದ್ಧತಿಯಲ್ಲಿ ಆಗಬೇಕಾದ ಪ್ರಮುಖ ಬದಲಾವಣೆಗಳು: ಶಿಕ್ಷಣ ದುಬಾರಿಯಾಗದೆ ಎಲ್ಲಾ ವರ್ಗದ ಜನರಿಗೂ ಕೈಗೆಟುಕುವಂತಿರಬೇಕು. ಪ್ರೌಢಶಾಲೆಯವರೆಗೆ ಶಿಕ್ಷಣ ಮಾತೃಭಾಷೆಯಲ್ಲಿರಬೇಕು. ಡೊನೇಷನ್ ಪದ್ಧತಿ ಸಂಪೂರ್ಣವಾಗಿ ರದ್ದಾಗಬೇಕು. ಪಠ್ಯಪುಸ್ತಕಗಳಲ್ಲಿ ಪರಿಸರಪ್ರಜ್ಞೆ, ದೇಶಭಕ್ತಿ, ನೀತಿ, ಆತ್ಮರಕ್ಷಣೆ ಮುಂತಾದ ವಿಷಯಗಳಿಗೆ ಆದ್ಯತೆಯಿರಬೇಕು. ಪಠ್ಯಪುಸ್ತಕಗಳು ಭಾರತದ ಸಂಸ್ಕೃತಿ, ಸಾಹಿತ್ಯ, ಕಲೆ ಇತ್ಯಾದಿಗಳನ್ನು ತಿಳಿಯಲು ಮತ್ತು ರಕ್ಷಿಸಲು ವಿದ್ಯಾರ್ಥಿಗಳು ಅನುಸರಿಸಬೇಕಾದ ಮಾರ್ಗದ ತಿಳುವಳಿಕೆ ನೀಡಬೇಕು ಮತ್ತು ಇದು ಕಡ್ಡಾಯವಾಗಿರಬೇಕು. ಪಠ್ಯಪುಸ್ತಕದ ಓದಿನ ಜೊತೆಗೆ ಪಠ್ಯೇತರ ವಿಷಯ (ಕ್ರೀಡೆ, ಕಲೆ, ಸಾಹಿತ್ಯ)ಗಳ ಕಲಿಕೆಗೆ ಹೆಚ್ಚಿನ ಪ್ರೋತ್ಸಾಹವಿರಬೇಕು. ಜಾತಿ, ಧರ್ಮವನ್ನು ಅನುಸರಿಸಿ ಸೀಟ್ ಹಂಚುವ ಈಗಿನ ವಿಧಾನ ಸಂಪೂರ್ಣವಾಗಿ ರದ್ದಾಗಬೇಕು. 'ವಿದ್ಯಾರ್ಥಿಗಳ ಜ್ಞಾನವೇ ಅವರ ಮಾನದಂಡವಾಗಿರಬೇಕು.' ವಿದ್ಯಾರ್ಥಿಗಳು ಅವರ ಇಚ್ಛೆಯ ವಿಷಯವನ್ನೇ ಓದಲು ಹೆಚ್ಚಿನ ಪ್ರೋತ್ಸಾಹ ಕೊಡಬೇಕು. ಮನೆ ಪಾಠದ ವ್ಯವಸ್ಥೆ ಸಂಪೂರ್ಣವಾಗಿ ರದ್ದಾಗಿ, ಅವರ ಎಲ್ಲಾ ಆವಶ್ಯಕತೆಗಳನ್ನು ಶಾಲಾ, ಕಾಲೇಜುಗಳಲ್ಲಿ ಶಿಕ್ಷಕರು ಪೂರೈಸಬೇಕು. ವಿದ್ಯಾರ್ಥಿ ಗಳಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸುವ ವಿಷಯವನ್ನು ಬೋಧಿಸಬೇಕು.

ಭಾಗ್ಯಲಕ್ಷ್ಮಿ ಎಚ್. ಅಂತಿಮ ಬಿ. ಎಸ್ಸಿ (ಪಿ. ಎಂ. ಸಿ)
ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು.

**ಹೌದು**, ಬದಲಾವಣೆ ಅಗತ್ಯ. ಏಕೆಂದರೆ, ಇಂದಿನ ಶಿಕ್ಷಣ ಪದ್ಧತಿಯಲ್ಲಿ ವಿದ್ಯಾರ್ಥಿಗಳು ಬಹುಮುಖ ವ್ಯಕ್ತಿತ್ವ ಹಾಗೂ ಉತ್ತಮ ಜೀವನಶೈಲಿ ಬೆಳೆಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ವಿದ್ಯಾರ್ಥಿಗಳು ಕೇವಲ ಪುಸ್ತಕದ ಹುಳುಗಳಾಗಿ ವರ್ತಿಸುತ್ತಾ ಪರೀಕ್ಷೆಯಲ್ಲಿ ಕೇವಲ ಎರಡೂವರೆ ಘಂಟೆಯಲ್ಲಿ ಉತ್ತರ ಬರೆಯಲು ಎಷ್ಟು ಬೇಕೋ ಅಷ್ಟು ಮಾತ್ರ ಮಾಹಿತಿಯನ್ನು ಪಡೆದುಕೊಳ್ಳುತ್ತಿದ್ದಾರೆ. ಉಳಿದಂತೆ ಸಾಮಾನ್ಯವಾಗಿ 90% ತಿಳಿದುಕೊಳ್ಳಬೇಕಾದ್ದನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡುತ್ತಿಲ್ಲ, ಅಥವಾ ಶಿಕ್ಷಣ ಪದ್ಧತಿಯಲ್ಲಿ ಅದಕ್ಕೆ ಅವಕಾಶವಿರುವುದಿಲ್ಲ. ಈಗಿನ ಶಿಕ್ಷಣ ಪದ್ಧತಿಯಲ್ಲಿ ಕಲಿಕಾ ಮಾಧ್ಯಮ ಹಾಗು ಭಾಷಾ ಸಮಸ್ಯೆಗಳು ಬಹು ಮುಖ್ಯವಾಗಿ ವಿದ್ಯಾರ್ಥಿಗಳ ಮೇಲೆ ದುಷ್ಪರಿಣಾಮ ಬೀರುತ್ತಿವೆ. ಆದುದರಿಂದ ಸಂಬಂಧಪಟ್ಟವರು ಈ ಎರಡೂ ಸಮಸ್ಯೆಗಳನ್ನು ಪ್ರಥಮವಾಗಿ ಬಗೆಹರಿಸಬೇಕು. ಹಾಗೂ ಶಿಕ್ಷಣ ಪದ್ಧತಿ ಹೇಗಿರಬೇಕೆಂದರೆ ಶಿಕ್ಷಣದ ನಂತರ ವಿದ್ಯಾರ್ಥಿಯು ಯಾರ ಮೇಲೂ ಅವಲಂಬಿತನಾಗಿರದೇ ಸ್ವತಂತ್ರವಾಗಿ ಬದುಕುವಷ್ಟು ಶಕ್ತಿಯನ್ನು ಆತ ಪ್ರಾರಂಭದಿಂದಲೇ ಬೆಳೆಸಿಕೊಳ್ಳುವಂತಿರಬೇಕು. ವಿದ್ಯಾರ್ಥಿಯು ಸಾಮಾಜಿಕ ಕಳಕಳಿಯ ಮನೋಭಾವನೆಯನ್ನು ಬೆಳೆಸಿಕೊಂಡು ದೇಶಕ್ಕೆ ಆಸ್ತಿಯಂತೆ ಬೆಳೆಯಬೇಕೇ ಹೊರತು ದೇಶಕ್ಕೆ ಹೊರೆಯಾಗಬಾರದು. ಆ ರೀತಿ ಶಿಕ್ಷಣ ಪದ್ಧತಿ ಬದಲಾಗಬೇಕು.

ಮಂಜುನಾಥ. ಕೆ. ದ್ವಿತೀಯ ಬಿ.ಫಾರ್ಮ,
ಜೆ.ಎಸ್.ಎಸ್ ಫಾರ್ಮಸಿ ಕಾಲೇಜು, ಮೈಸೂರು.

---

ನಾವು ಮೂರು 'R'ಗಳ ಬಗ್ಗೆ ಸಾಕಷ್ಟು ಕೇಳಿದ್ದೇವೆ. ಆದರೆ ಇವುಗಳೆಲ್ಲಕ್ಕಿಂತ ಮುಖ್ಯವಾದುದು ನಾಲ್ಕನೆಯ 'R' ಅಂದರೆ ಯಥಾರ್ಥ **Religion (ಧರ್ಮ).** —*ಡಾ. ಭಗವಾನ್ ದಾಸ್.*

**ಇಂದಿನ** ಶಿಕ್ಷಣ ಪದ್ಧತಿಯಲ್ಲಿ ಬದಲಾವಣೆ ಅತ್ಯಗತ್ಯವಾಗಿ ಬೇಕಾಗಿದೆ. ಯುವಕರು ಇಂದು ದುಶ್ಚಟಗಳಿಗೆ ಬಲಿಯಾಗಿ ತಮ್ಮ ಉಜ್ವಲವಾದ ಭವಿಷ್ಯವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಪ್ರಚಲಿತ ಶಿಕ್ಷಣಕ್ರಮವೂ, ಸಮಾಜ ರಚನೆಯೂ —ವೈಚಾರಿಕತೆಯಲ್ಲಿ ಸ್ವಂತಿಕೆಯನ್ನೂ ಮತ್ತು ಜೀವನ ಪರಿಪೂರ್ಣತೆಯನ್ನೂ ದೊರಕಿಸಿಕೊಟ್ಟಿಲ್ಲ.

ಆದ್ದರಿಂದ ನಮಗೆ ಇಂದು ಈ ಕೆಳಕಂಡ ಅಂಶಗಳನ್ನು ಆಧರಿಸಿದ ಬದಲಾದ ಶಿಕ್ಷಣ ಅಗತ್ಯ: ಮಗುವಿನ ವಿಕಾಸದಲ್ಲಿ ಆಸಕ್ತಿಯುಳ್ಳ ಪೋಷಕರು ಮನೆಯ ವಾತಾವರಣವನ್ನು ಮೊದಲು ಬದಲಿಸಬೇಕು. ಯೋಗ್ಯ ಶಿಕ್ಷಕರ ಮೂಲಕ ಶಾಲೆಯ ಪರಿಸರವನ್ನು ರೂಪಾಂತರಗೊಳಿಸಬೇಕು. ಮನೆಯ ಮತ್ತು ಶಾಲೆಯ ಶಿಕ್ಷಣ ಒಂದಕ್ಕೊಂದು ಪೂರಕವಾಗಿರಬೇಕು. ಇದರಿಂದ ಶಿಕ್ಷಕರು ಮತ್ತು ತಂದೆ-ತಾಯಿಯರು ಶಿಕ್ಷಣ ಪಡೆದಂತಾಗುತ್ತದೆ. ವಿದ್ಯಾರ್ಥಿಗಳ ಖಾಸಗೀ ಜೀವನಕ್ಕೂ ಅವರ ಸಾಮಾಜಿಕ ವರ್ತನೆಗೂ ಇರುವ ಅಂತರ ಕಡಿಮೆ ಮಾಡಿ ಜೀವನದ ಸಾಮರಸ್ಯ ಬಲಪಡಿಸಬೇಕು. ಹೂವಿನಂತಿರುವ ಮಕ್ಕಳ ಮನಸ್ಸನ್ನು ಅರಳಲು ಬಿಡದೆ ಮೊಗ್ಗಿನಲ್ಲೇ ಹೊಸಕಿಹಾಕಿ ಮುಂದಿನ ಜೀವನವೆಲ್ಲ ನಿರಾಶೆ, ಖಿನ್ನತೆಗಳಿಗೆ ಇಂಬು ಕೊಡದಂತೆ ನೋಡಿಕೊಳ್ಳಬೇಕು. 'ನಮ್ಮನ್ನು ನಾವು ಪರಿವರ್ತಿಸಿಕೊಳ್ಳುವುದರಿಂದಲೇ ಯೋಗ್ಯ ಶಿಕ್ಷಣ ಕ್ರಮ ಏರ್ಪಡುತ್ತದೆ.' ಹೀಗೆ ಇದ್ದುದರಲ್ಲಿಯೆ ತೃಪ್ತಿ ಪಡುತ್ತಾ, ಕರುಣಾವಂತರಾಗುವಂತೆ ಮಾಡುವ ಶಿಕ್ಷಣ ಅಗತ್ಯ. ಇದನ್ನು ನಾವು ಅಭ್ಯಸಿಸಬೇಕು.

ಆಂಗ್ಲಪದ *education* (ಶಿಕ್ಷಣ) ಲ್ಯಾಟಿನ್ ಪದವಾದ educere ಎಂದರೆ '**ಹೊರತರುವುದು**', ಎಂಬ ಶಬ್ದದಿಂದ ವ್ಯುತ್ಪತ್ತಿಯಾಗಿದೆ. ಆದ್ದರಿಂದ ಶಿಕ್ಷಣ ಎಂದರೆ ಅಂತರ್ಯದಲ್ಲಿರುವ ಪ್ರತಿಭೆ, ಸಾಮರ್ಥ್ಯ, ಪರಿಪೂರ್ಣತೆಗಳು ಹೊರಹೊಮ್ಮುವಂತೆ ಮಾಡುವುದು.

ಕೇವಲ ಡಿಗ್ರಿಗಳಿಗಾಗಿ ಪರಿಶ್ರಮಿಸಿ ಯಾಂತ್ರಿಕ ಪಟುತ್ವವನ್ನು ಸಂಪಾದಿಸಿದರೆ ಸಾಲದು. ಜೊತೆಗೆ ವಿವೇಚನಾ ಪೂರ್ಣವಾದ ಪ್ರಜ್ಞೆಯೂ ಜಾಗೃತವಾಗುವಂತೆ ಮಾಡುವ ಶಿಕ್ಷಣ ಇಂದಿನ ವಿದ್ಯಾರ್ಥಿಗಳಿಗೆ ಬೇಕಾಗಿದೆ. ಸರಳ ಜೀವನ ನಡೆಸುತ್ತಾ ಪರಮಾತ್ಮನ ಶೋಧದಲ್ಲಿ ಮಗ್ನರಾಗುವುದರಿಂದ ಮಾನವ ಜೀವನ ಸಾರ್ಥಕತೆಯನ್ನು ಪಡೆಯುತ್ತದೆ. ಹೃದಯವನ್ನು ಪರಿವರ್ತಿಸಿಕೊಂಡು, ಒಳಗಿನ ಒಳಿತನ್ನು ಪೋಷಿಸಿ ಅಂತರಂಗ ಕ್ರಾಂತಿಗೆ ಪ್ರೇರಕವಾದ ಸುಜ್ಞಾನವನ್ನು ಕಲಿಸುವ ಶಿಕ್ಷಣ ಅಗತ್ಯ.

ಬಿ.ಸಿ.ರಾಜೇಶ್, ಪ್ರಥಮ ಎಲ್.ಎಲ್.ಬಿ.
ವಿದ್ಯಾವರ್ಧಕ ಲಾ ಕಾಲೇಜು, ಮೈಸೂರು

**ಇಂದಿನ** ಶಿಕ್ಷಣ ಪದ್ಧತಿಯಲ್ಲಿ ಆರೋಗ್ಯಪೂರ್ಣ ದೇಹವಿಲ್ಲದ, ವೃತ್ತಿಪರಿಣತಿಯಿಲ್ಲದ, ನೈತಿಕತೆಯಿಲ್ಲದ ಆತ್ಮವಿಶ್ವಾಸಹೀನ ಪರಾವಲಂಬೀ ಪದವೀಧರರು ತಯಾರಾಗುತ್ತಿದ್ದಾರೆ. ಶಿಕ್ಷಣದ ಮೂಲೋದ್ದೇಶವಾದ ವ್ಯಕ್ತಿತ್ವ ನಿರ್ಮಾಣದಲ್ಲಿ ವಿಫಲವಾಗಿರುವ ಇಂದಿನ ಶಿಕ್ಷಣ ಪದ್ಧತಿಯಲ್ಲಿ ಆಮೂಲಾಗ್ರ ಬದಲಾವಣೆ ಅತ್ಯಗತ್ಯ.

ಇಂದಿನ ಪರಿಸ್ಥಿತಿಯಲ್ಲಿ ವಿದ್ಯಾರ್ಥಿಗಳಿಗೆ ದೈಹಿಕ ಶಿಕ್ಷಣದ ಅವಧಿಗಳು ಭಯ ಹುಟ್ಟಿಸುತ್ತವೆ. ಸುಡುವ ಬಿಸಿಲಿನಲ್ಲಿ ಸಾಲಾಗಿ ನಿಂತು ವ್ಯಾಯಾಮ ಮಾಡುವುದನ್ನು ಮತ್ತು ವಿದ್ಯಾರ್ಥಿಗಳು ದೈಹಿಕ ಶಿಕ್ಷಕನಿಂದ ಏಟು ತಿನ್ನುವುದನ್ನು ಕಾಣುವ ಪೋಷಕರು ದೈಹಿಕ ಶಿಕ್ಷಣವೇ ಬೇಡ ಎಂದು ಅಳಲಿಡುವಂತಾಗಿದೆ. ಇದರ ಬದಲಾಗಿ ಸೂಕ್ತ ಸಮಯದಲ್ಲಿ, ಸೂಕ್ತ ಶಿಕ್ಷಕನಿಂದ, ಎಲ್ಲಾ ವಿದ್ಯಾರ್ಥಿಗಳಿಗೆ, ವಯಸ್ಸಿಗೆ ಅನುಗುಣವಾಗಿ ದೈಹಿಕ ಶಿಕ್ಷಣ ದೊರೆಯಬೇಕು. ಬೌದ್ಧಿಕ ಪರೀಕ್ಷೆಗಳಿರುವಂತೆ ದೈಹಿಕ ಶಿಕ್ಷಣಕ್ಕೆ ಕಡ್ಡಾಯವಾಗಿ ಪರೀಕ್ಷೆ, ಅಂಕಗಳು ಇರಬೇಕು. ಆಗ ಮಾತ್ರ ಸುದೃಢ ಯುವಶಕ್ತಿಯ ತಯಾರಿಕೆ ಸಾಧ್ಯ.

ಬೌದ್ಧಿಕವಾಗಿ, ಪ್ರಾಥಮಿಕ ಅಥವಾ ಮಾಧ್ಯಮಿಕ ಶಾಲೆಯ ನಂತರ ವಿದ್ಯಾರ್ಥಿಗಳಿಗೆ ಅವರ ಆಯ್ಕೆಯ ವಿಷಯವನ್ನು ಮಾತ್ರ ಅಧ್ಯಯನ ಮಾಡುವ ಅವಕಾಶವಿರಬೇಕು. ವೃತ್ತಿಪರ ಶಿಕ್ಷಣದೆಡೆಗೆ ಹೆಚ್ಚಿನ ಒಲವು, ಉತ್ತೇಜನ ಅಗತ್ಯ.

ನೈತಿಕ ಮೌಲ್ಯಗಳನ್ನು ವಿದ್ಯಾರ್ಥಿಗಳ ಎಳೆ ಮನಸ್ಸಿನಲ್ಲಿ ತುಂಬಿದಾಗ ಮಾತ್ರ ಉತ್ತಮ ಸಮಾಜದ ನಿರ್ಮಾಣ ಸಾಧ್ಯ. ಈ ದಿಸೆಯಲ್ಲಿ ವಿದ್ಯಾರ್ಥಿಗಳಿಗೆ ಮೌಲ್ಯಗಳನ್ನು ಹೇಳುವುದಲ್ಲದೇ ಅವನ್ನು ಆಚರಿಸಿದವರ ಜೀವನಕ್ರಮವನ್ನೂ ಪಠ್ಯದಲ್ಲಿ ಅಳವಡಿಸುವುದರ ಅಗತ್ಯ ಇದೆ. ಒಗ್ಗಟ್ಟಿನಲ್ಲಿ ಬಲವಿದೆ ಎಂಬುದನ್ನು ಪಕ್ಷಿಗಳೆಲ್ಲಾ ಬಲೆಯನ್ನು ಒಟ್ಟಿಗೆ ಹಾರಿಸಿಕೊಂಡುಹೋದ ಕಥೆಯಿಂದ

'ಯುವಸ್ಪಂದನ' ಕಾರ್ಯಕ್ರಮದ
ಬಹುಮಾನ ವಿಜೇತರು.

೧. ಭಾಗ್ಯಲಕ್ಷ್ಮಿ. ಎಚ್. ಅಂತಿಮ ಬಿ.ಎಸ್ಸಿ
ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು.

೨. ಮಂಜುನಾಥ. ಕೆ. ದ್ವಿತೀಯ ಬಿ.ಫಾರ್ಮ
ಜೆ.ಎಸ್.ಎಸ್ ಫಾರ್ಮಸಿ ಕಾಲೇಜು, ಮೈಸೂರು.

೩. ರಾಜೇಶ್.ಬಿ.ಸಿ. ಪ್ರಥಮ ಎಲ್.ಎಲ್.ಬಿ.
ವಿದ್ಯಾವರ್ಧಕ ಕಾನೂನು ಕಾಲೇಜು, ಮೈಸೂರು

೪. ವಿಶ್ವನಾಥ ಎ.
ಪ್ರಥಮ ವರ್ಷದ ಕಾನೂನು ವಿದ್ಯಾರ್ಥಿ, ಮೈಸೂರು.

೫. ರತ್ನಾಕರ ಎಂ.ಜೆ. ಅಂತಿಮ ಬಿ.ಎಸ್ಸಿ.
ಮಾನಸ ಗಂಗೋತ್ರಿ.ಮೈಸೂರು.

೬. ಸಿರಿದೇವಿ ಹೆಚ್. ಎಸ್. ಅಂತಿಮ ಬಿ.ಎಸ್ಸಿ.
ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು.

೭. ರೂಪಾ ಎಂ.ಬಿ., ಬಿ.ಬಿ.ಎಂ, ಮೂರನೇ ಸೆಮಿಸ್ಟರ್
ಎಂ.ಎಂ.ಕೆ. ಮತ್ತು ಎಸ್.ಡಿ.ಎಂ. ಕಾಲೇಜು, ಮೈಸೂರು.

೮. ಹರ್ಷ ಡಿ.ಕೆ. ಅಂತಿಮ ಬಿ.ಎಸ್ಸಿ.
ಯುವರಾಜ ಕಾಲೇಜು, ಮೈಸೂರು.

೯. ವಿಷ್ಣು ಎಚ್. ದ್ವಿತೀಯ ಬಿ.ಕಾಂ.
ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು.

೧೦. ಉಷಾರಾಣಿ ಆರ್. ದ್ವಿತೀಯ ಎಲ್.ಎಲ್.ಬಿ.
ವಿದ್ಯಾವರ್ಧಕ ಕಾನೂನು ಕಾಲೇಜು, ಮೈಸೂರು

ಭಾವನೆ ಮತ್ತು ಇಚ್ಛೆಯನ್ನು ಪಳಗಿಸದಿದ್ದರೆ ವ್ಯಕ್ತಿಯು ಶಿಕ್ಷಣ ಪಡೆದಂತಾಗಲಿಲ್ಲ. ಅವನು ಕೇವಲ ಬೌದ್ಧಿಕ ಕಸರತ್ತುಗಳಲ್ಲಿ ಪರಿಣತನಾಗಿರುತ್ತಾನಷ್ಟೆ. ಈ ಕಸರತ್ತುಗಳ ಮೂಲಕ ಅವನು ತನ್ನ ಅನ್ನವನ್ನು ಸಂಪಾದಿಸಬಹುದು. ಅವನು ಹೃದಯವನ್ನು ಮಿಡಿಯಲಾರ ಅಥವಾ ಜೀವನವನ್ನು ನೀಡಲಾರ. ಅವನು ಮಾನವನೇ ಅಲ್ಲ, ಜಾಣ ವಾನರ ಅಷ್ಟೆ... ಉದಾತ್ತವಾದುದನ್ನು ಭಾವಿಸುವುದು, ಮಹೋನ್ನತವಾದುದನ್ನು ಇಚ್ಛಿಸುವುದು—ಇದು ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಶಿಕ್ಷಣ ಪ್ರಕ್ರಿಯೆಯ ಬೇರೆ ಎಲ್ಲ ಅಂಶಗಳಿಗಿಂತ ಸಾವಿರಪಾಲು ಮುಖ್ಯವಾದುದು.

—ಸೋದರಿ ನಿವೇದಿತಾ

ಮಕ್ಕಳು ಗ್ರಹಿಸುತ್ತಾರೆ. ಹರಿಶ್ಚಂದ್ರನ ಕಥೆಯಿಂದ ಸತ್ಯ, ಗಾಂಧೀಜಿಯಿಂದ ಅಹಿಂಸೆ, ವಿವೇಕಾನಂದರಿಂದ ಶಕ್ತಿ, ವಿಶ್ವೇಶ್ವರಯ್ಯನವರಿಂದ ಪ್ರಾಮಾಣಿಕತೆ ಅವರ ಜೀವನಕಥೆ ಓದಿದವರಿಗೆ ಸಹಜವಾಗಿಯೇ ಬರುತ್ತವೆ.

ಮೇಲ್ಕಂಡ ದಿಸೆಯಲ್ಲಿ ತಜ್ಞರ ಸಮಾಲೋಚನೆಯೊಂದಿಗೆ ಶಿಕ್ಷಣ ಪದ್ಧತಿಯಲ್ಲಿ ಬದಲಾವಣೆ ಇಂದಿನ ಜರೂರು ಅಗತ್ಯ.

ವಿಶ್ವನಾಥ. ಎ.
ಪ್ರಥಮ ವರ್ಷದ ಕಾನೂನು ವಿದ್ಯಾರ್ಥಿ, ಮೈಸೂರು.

ಶಿಕ್ಷಣವೆಂದರೆ ಮಾನವನಲ್ಲಿ ಅಂತರ್ಗತವಾಗಿರುವ ಉನ್ನತ ಮೌಲ್ಯಗಳನ್ನು ಹೊರಹೊಮ್ಮಿಸುವುದು ಎಂದು ತಿಳಿದಿದ್ದರೂ ಪ್ರಸ್ತುತ ಶಿಕ್ಷಣಕ್ರಮ ವಿದ್ಯಾರ್ಥಿಯ ವ್ಯಕ್ತಿತ್ವ ವಿಕಸನಕ್ಕೆ ಅವಕಾಶ ಕೊಡದೆ ಬರಿದೇ ಸ್ಮರಣ ಶಕ್ತಿಯ ಮೂಲಕ ಅವನ ಮಟ್ಟವನ್ನು ನಿರ್ಧರಿಸುತ್ತಿರುವುದು ಶೋಚನೀಯ ಸಂಗತಿ. ಆದುದರಿಂದ ಇಂದಿನ ಶಿಕ್ಷಣ ಕ್ರಮದಲ್ಲಿ ಬದಲಾವಣೆ ಅಗತ್ಯ.

ಹಾಗಾದರೆ ನಮಗೀಗ ಎಂಥ ಬದಲಾವಣೆ ಅಗತ್ಯ ಎಂದು ಯೋಚಿಸಿದಾಗ 'ಓದುವ ಜ್ಞಾನ ಬದುಕಿಗೆ ಅನ್ವಯವಾಗುವಂತಹ ಶಿಕ್ಷಣ ಬೇಕು.' ಆಧುನಿಕ ಶಿಕ್ಷಣವು ಮಕ್ಕಳಲ್ಲಿ ನೈತಿಕ, ಸಾಮಾಜಿಕ ಹಾಗೂ ಆಧ್ಯಾತ್ಮಿಕ ಮೌಲ್ಯಗಳನ್ನು ಬೆಳೆಸುವ ಪಠ್ಯಕ್ರಮವನ್ನು ಅಳವಡಿಸಬೇಕು.

ಜೀವನ ಭದ್ರತೆಗಾಗಿ ಒಂದು ನೌಕರಿ ಒದಗಿಸಲು ಮಾತ್ರ ಸಮರ್ಥವಾಗಿರುವ ಈ ಶಿಕ್ಷಣಕ್ರಮ ಈ ಅದ್ಭುತ ಜಗತ್ತು ನಮಗೆ ಏನೆಲ್ಲಾ ಕೊಟ್ಟಿದೆ ಏನೆಲ್ಲಾ ಕೊಟ್ಟಿತು ಎನ್ನುವುದನ್ನು ಅರಿವಿಗೆ ತಂದುಕೊಡುವಲ್ಲಿ ಅಸಮರ್ಥವಾಗಿದೆ. ಆದುದರಿಂದ ಸರ್ವ ಕಾಲದಲ್ಲೂ ಸರ್ವಜನರಿಂದಲೂ ಗೌರವಿಸಲ್ಪಡುವ ಮಾನವೀಯ ಮೌಲ್ಯಗಳ ಬಗ್ಗೆ ಮತ್ತು ಸಾಮಾಜಿಕ ನ್ಯಾಯದ ಬಗ್ಗೆ ಒತ್ತು ಕೊಡುವಂತಹ ಶಿಕ್ಷಣ ವ್ಯವಸ್ಥೆ ಬೇಕು. ಪ್ರಜಾಪ್ರಭುತ್ವ ಸರಕಾರ ಹೊಂದಿದ ನಮ್ಮ ದೇಶದಲ್ಲಿ ಸಾಮಾಜಿಕ ಮೌಲ್ಯಗಳನ್ನು ಜನತೆಯಲ್ಲಿ ಬೆಳೆಸುವುದು ಅವಶ್ಯಕ. ಸಹಕಾರ, ಸಹಾನುಭೂತಿ, ದಯೆ, ಪ್ರೀತಿ, ಹೊಂದಾಣಿಕೆ, ಸಂಸ್ಕೃತಿಯ ರಕ್ಷಣೆ ಮುಂತಾದವುಗಳನ್ನು ಮೈಗೂಡಿಸಿಕೊಳ್ಳುವಂತಹ ಶಿಕ್ಷಣ ಕ್ರಮವನ್ನು ಜಾರಿಗೊಳಿಸಬೇಕು.

ರತ್ನಾಕರ ಎಂ.ಜೆ. ತೃತೀಯ ಬಿ.ಎಸ್ಸಿ.,
ಮಾನಸ ಗಂಗೋತ್ರಿ.ಮೈಸೂರು.

ಹೌದು, ಇಂದಿನ ಶಿಕ್ಷಣ ಪದ್ಧತಿಯಲ್ಲಿ ಬದಲಾವಣೆಯ ಅಗತ್ಯ ಬಹಳವಾಗಿದೆ. ಇಂದಿನ ಶಿಕ್ಷಣವನ್ನು ಹೊಂದಿ ವಿದ್ಯಾವಂತ ನೆನಿಸಿಕೊಂಡವನಲ್ಲಿ ಕಾಣಬರುವ ಹಲವಾರು ನ್ಯೂನತೆಗಳೆಂದರೆ ಮಾನಸಿಕ ಗೊಂದಲ, ಮಾನಸಿಕ ಅಶಾಂತಿ, ಅತ್ಯಗತ್ಯವಾದ ಅವಶ್ಯ ವಿಚಾರಗಳ ಬಗೆಗೆ ಆಸಕ್ತಿ ಕುಂದಿರುವುದು, ಎಲ್ಲದರಲ್ಲೂ ಸಂಶಯದ ದೃಷ್ಟಿ, ಬೇಗನೇ ಮಾನಸಿಕವಾಗಿ ಧೈರ್ಯಗುಂದುವುದು, ಜೀವನವನ್ನೆದುರಿಸುವ ದಾರಿ ತೋಚದಿರುವ ಸಂದರ್ಭದಲ್ಲಿ ನೇರವಾಗಿ ಆತ್ಮಹತ್ಯೆಯ ಆಲೋಚನೆ, ಮುಂತಾದುವು. ಶಿಕ್ಷಣದ ಉದ್ದೇಶ ಶಿಕ್ಷಣಾರ್ಥಿಯನ್ನು ಸಾಧ್ಯವಾದಷ್ಟು ಪರಿಪೂರ್ಣ ವ್ಯಕ್ತಿಯನ್ನಾಗಿ ಮಾಡುವುದಾಗಿರಬೇಕೇ ವಿನಾ ಈ ಸಮಸ್ಯೆಗಳನ್ನು ಸೃಷ್ಟಿಸುವುದಲ್ಲ.

ಇಂದು ಮಾನಸಿಕ ರೋಗಿಗಳಂತಾಗಿರುವ ನಮ್ಮ ಜನತೆಗೆ ಉತ್ಸಾಹ ತುಂಬುವ, ಧೈರ್ಯ ತುಂಬುವ ಶಿಕ್ಷಣ ಬೇಕಾಗಿದೆ. ಮಾನಸಿಕ ಶಾಂತಿಯನ್ನು ಎಂದೂ ಕಾಪಾಡಬಲ್ಲ ಆಧ್ಯಾತ್ಮ ಶಿಕ್ಷಣ ನಮ್ಮ ಶಿಕ್ಷಣದ ಜೀವಾಳವಾಗಬೇಕಾಗಿದೆ. ಮನುಷ್ಯ-ಮನುಷ್ಯನಲ್ಲಿ ನಂಬಿಕೆ ಕಳೆಯದೆ ಉಳಿಸಬಲ್ಲ ಶಿಕ್ಷಣ ಇಂದು ಬೇಕಾಗಿದೆ. ಕೇವಲ ಅಂಕಗಳಿಗಾಗಿ ವಿದ್ಯಾರ್ಜನೆ ಮಾಡಲಿಚ್ಛಿಸುವ ವಿದ್ಯಾರ್ಥಿಗೆ ತನ್ನ ಜೀವನವನ್ನು ನಡೆಸಲು ವಿಶ್ವಾಸ ತುಂಬುವ ಶಿಕ್ಷಣ, ನಿತ್ಯ ಜೀವನದಲ್ಲಿ ನೀತಿಯನ್ನಳವಡಿಸಿಕೊಂಡು ಬಾಳಲು ಪ್ರೇರಣೆ ನೀಡುವ ಶಿಕ್ಷಣ ಬೇಕು.

ಸಿರಿದೇವಿ ಹೆಚ್. ಎಸ್. ತೃತೀಯ ಬಿ.ಎಸ್ಸಿ.
ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು.

ಹೌದು, ಇಂದಿನ ಶಿಕ್ಷಣ ಪದ್ಧತಿಯಲ್ಲಿ ಬದಲಾವಣೆ ಅಗತ್ಯ. ಇಂದಿನ ಶಿಕ್ಷಣ ಪದ್ಧತಿ ಕೇವಲ ಬೌದ್ಧಿಕ ವಿಕಾಸಕ್ಕೆ, ಸ್ವಲ್ಪ ಮಟ್ಟಿಗೆ ದೈಹಿಕ ವಿಕಾಸಕ್ಕೆ, ಒತ್ತುಕೊಟ್ಟಿದೆಯೇ ಹೊರತು, ನೈತಿಕ-ಆಧ್ಯಾತ್ಮಿಕ ವಿಕಾಸದ ಕಡೆ ಗಮನ ಹರಿಸಿಲ್ಲ. ಪರಿಣಾಮವಾಗಿ ಬುದ್ಧಿವಂತ ರಾಕ್ಷಸ ಸಂತಾನ—ನೀತಿ, ನಿಯಮ, ಶಿಸ್ತು, ಮೌಲ್ಯಗಳಿಗೆಲ್ಲ ತಿಲಾಂಜಲಿಯಿತ್ತು, ಸ್ವಾರ್ಥಕ್ಕಾಗಿ ಎಂಥ ಭ್ರಷ್ಟಾಚಾರ, ಕ್ರೌರ್ಯ, ಹಿಂಸೆಗೂ ಹೇಸದ ಜನಾಂಗ ನಿರ್ಮಾಣವಾಗುತ್ತಿದೆ. ಆದ್ದರಿಂದ ವ್ಯಕ್ತಿತ್ವದ ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸಿ, ಯೋಗ್ಯ ವ್ಯಕ್ತಿನಿರ್ಮಾಣಕ್ಕೆ ಎಡೆಮಾಡಿಕೊಡುವಂಥ ಶಿಕ್ಷಣ ನಮಗಿಂದು ಬೇಕು. ಈಗಿನ ಶಿಕ್ಷಣ ವಿಧಾನದಲ್ಲಿ ಬಾಹ್ಯ ಪರಿಸರ ಮಾಲಿನ್ಯ ನಿವಾರಣೆಯ ಬಗ್ಗೆ ಸಾಕಷ್ಟು ಹೇಳಲಾಗುತ್ತದೆ. ಅದರ ಜೊತೆ ಜೊತೆಗೇ ಆಂತರಿಕ ಪರಿಸರ ಮಾಲಿನ್ಯವನ್ನು ದೂರ ಮಾಡಿ, ಆತ್ಮಶಕ್ತಿ ಜಾಗೃತಿಗೈದು

ವ್ಯಕ್ತಿ ತನ್ನ ಕಾಲ ಮೇಲೆ ತಾನು ನಿಂತು ಬಹುಜನರ ಹಿತಕ್ಕೂ, ಸುಖಕ್ಕೂ ದುಡಿಯಬಲ್ಲಂತೆ ಮಾಡಬಲ್ಲ ಶಿಕ್ಷಣ ವಿಧಾನ ನಮಗಿಂದು ಬೇಕು.

ರೂಪಾ ಎಂ.ಬಿ. ಮೂರನೇ ಸೆಮಿಸ್ಟರ್, ಬಿ.ಬಿ.ಎಂ.
ಎಂ.ಎಂ.ಕೆ. ಮತ್ತು ಎಸ್.ಡಿ.ಎಂ. ಕಾಲೇಜು, ಮೈಸೂರು.

**ಹೌದು**, ಇಂದಿನ ಶಿಕ್ಷಣ ಪದ್ಧತಿಯಲ್ಲಿ ಬದಲಾವಣೆ ಅಗತ್ಯ. ಹಿಂದಿನ ಕಾಲದ ಗುರುಕುಲದ ಪದ್ಧತಿಯ ಮೂಲಕ ಗುರುಗಳ ಮತ್ತು ಶಿಷ್ಯರ ಬಾಂಧವ್ಯ ದೇವರ ಮತ್ತು ಭಕ್ತರ ರೀತಿಯಲ್ಲಿ ಇತ್ತು. ಹಾಗೆಯೇ ಇಂದೂ ಕೂಡ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳ ಬಾಂಧವ್ಯ ಉತ್ತಮವಾಗಬೇಕು. ಉಪಾಧ್ಯಾಯರ ವಿಷಯದಲ್ಲಿ ಶ್ರದ್ಧೆ ಗೌರವಗಳಿಲ್ಲದಿದ್ದರೆ ವಿದ್ಯೆಯಲ್ಲಿಯೂ ಆದರ ಉಂಟಾಗುವುದಿಲ್ಲ. ಇಂದಿನ ಶಿಕ್ಷಣ ಪದ್ಧತಿಯು ಯಾವ ರೀತಿಯದಾಗಿದೆಯೆಂದರೆ ಶ್ರೀಮಂತ ವಿದ್ಯಾರ್ಥಿಗಳು ಮನೆಪಾಠ, ಆಧುನಿಕ ತಾಂತ್ರಿಕ ಸೌಲಭ್ಯಗಳು ಹೀಗೆ ಅನೇಕ ಮಾರ್ಗಗಳಿಂದ ಮುಂದೆ ಬರುವಂತಾಗಿದೆ. ಆದರೆ ಬಡವರು, ಬುದ್ಧಿವಂತರಾಗಿದ್ದರೂ ಈ ಅನುಕೂಲಗಳಿಂದ ವಂಚಿತರಾಗಿ, ಮನೆಯಲ್ಲೂ ಸಹಾಯವಿಲ್ಲದೆ, ಕಾಲೇಜುಗಳಲ್ಲಿ ಪಾಠ ನಡೆಯದ ಕಾರಣ ಅವರ ಅಭಿವೃದ್ಧಿ ಮತ್ತು ದೇಶದ ಅಭಿವೃದ್ಧಿ ಕುಂಠಿತವಾಗಿದೆ. ಸರ್ಕಾರವು ಸರ್ಕಾರಿ ಶಾಲಾ ಕಾಲೇಜುಗಳಿಗೆ ಅಗತ್ಯವಾದ ನೆರವು, ಅಂದರೆ ಈ ಇಪ್ಪತ್ತೊಂದನೆಯ ಶತಮಾನ ಕಂಪ್ಯೂಟರ್ ಯುಗವಾಗುತ್ತಿರುವ ಕಾರಣ, ನಮಗೆ ಅಗತ್ಯವಾದ ಅಧ್ಯಾಪಕರು, ಕಂಪ್ಯೂಟರ್‌ಗಳನ್ನು ಒದಗಿಸಬೇಕು ಮತ್ತು ವಿದ್ಯಾರ್ಥಿಗಳು ಉಚಿತವಾಗಿ ಅಭ್ಯಾಸಮಾಡಲು ಅನುಕೂಲ ಮಾಡಿಕೊಡಬೇಕು. ಮುಂದೆ ಇಂತಹ ಶಿಕ್ಷಣ ಪದ್ಧತಿಯನ್ನು ಅನುಸರಿಸಿದರೆ ರಾಷ್ಟ್ರವು ಉನ್ನತ ಮಟ್ಟಕ್ಕೆ ಏರುವುದರಲ್ಲಿ ಸಂದೇಹವಿಲ್ಲ. ಶಿಕ್ಷಣ ಪದ್ಧತಿಯಲ್ಲಿ ಬದಲಾವಣೆ ಎಷ್ಟು ಅಗತ್ಯವೊ ವಿದ್ಯಾರ್ಥಿಗಳ ಪಾತ್ರ ಅಷ್ಟೇ ಮುಖ್ಯ.

ರಶ್ಮಿ ಎಸ್. ತೃತೀಯ ಬಿ.ಎಸ್ಸಿ.
ಮಹಾರಾಣಿ ಮಹಿಳಾ ಕಾಲೇಜು, ಮೈಸೂರು.

**ನಮ್ಮ** ಇಂದಿನ ಶಿಕ್ಷಣ ನಿಕೃಷ್ಟ ಎಂಬ ಸಮುದ್ರದ ತಳವನ್ನು ಮುಟ್ಟಿದೆ. ಇಂದು ಶಿಕ್ಷಣದ ವ್ಯಾಪಾರೀಕರಣವಾಗಿದೆ. ಶಿಕ್ಷಣ ವ್ಯವಸ್ಥೆ ತನ್ನ ಮೂಲ ತತ್ವವನ್ನೇ ಮರೆತು ಹಣದಾಹದಿಂದ ಕುದಿಯುತ್ತಿದೆ. ಶಿಕ್ಷಣ ವ್ಯವಸ್ಥೆಯ ಮೂಲ ತತ್ವವೆಂದರೆ ವಿದ್ಯಾರ್ಥಿಗಳ ಮನಸ್ಸನ್ನು ಉತ್ತಮ ಕ್ಷೇತ್ರವನ್ನಾಗಿ ಪರಿವರ್ತಿಸಿ ಅಲ್ಲಿ ಉತ್ತಮ ಗುಣಗಳ ಬೀಜವನ್ನು ಬಿತ್ತಿ ಅವರು ಸಮಾಜಕ್ಕಾಗಿ, ದೇಶಕ್ಕಾಗಿ ನಿಸ್ವಾರ್ಥದಿಂದ ದುಡಿಯುವಂತೆ ಮಾಡುವುದು. ಸ್ವಾಮಿ ವಿವೇಕಾನಂದರು ಹೇಳುವಂತೆ ಒಂದು ವ್ಯವಸ್ಥೆಯು ಅಥವಾ ಜೀವನವು ಎಲ್ಲಿಯವರೆಗೆ ತನ್ನ ಮೂಲತತ್ವವನ್ನು ಕಳೆದುಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಅದು ಜೀವಂತವಿರುತ್ತದೆ. ತನ್ನ ಮೂಲತತ್ತ್ವವನ್ನು ಕಳೆದುಕೊಂಡ ಕ್ಷಣದಿಂದ ಅದು ಪತನಕ್ಕೀಡಾಗುತ್ತದೆ. ನಮ್ಮ ಇಂದಿನ ಶಿಕ್ಷಣ ವ್ಯವಸ್ಥೆ ಅವನತಿಯತ್ತ ವೇಗವಾಗಿ ಸಾಗುತ್ತಿರುವುದು ಇದೇ ಕಾರಣಕ್ಕೆ ಇರಬೇಕು.

ಈಗ ತತ್ಕಾಲದಲ್ಲಿ ಆಗಬೇಕಿರುವ ಕೆಲಸವೆಂದರೆ ಸಾಯುತ್ತಿರುವ ಶಿಕ್ಷಣ ವ್ಯವಸ್ಥೆಗೆ ಜೀವವನ್ನು ತುಂಬುವುದು. ಅದು ಕೇವಲ ಗಣಿತ, ವಿಜ್ಞಾನ ಕಲಿಸುವುದಲ್ಲದೇ ಆಧ್ಯಾತ್ಮಿಕತೆಯನ್ನು ಕಲಿಸಬೇಕು. ಅದು ಗಾಂಧಿ, ವಿವೇಕಾನಂದರ ಜೀವನವನ್ನು ವಿವರಿಸುವಂತೆಯೇ ಅವರ ವಿಚಾರಧಾರೆಯನ್ನೂ ವಿವರಿಸಬೇಕು. ಅದು ಸಮಾಜ ಪರಿಚಯವನ್ನು ತಿಳಿಸುವುದರ ಜೊತೆಗೆ, ಮಾನವತೆಯನ್ನು ತಿಳಿಸಬೇಕು. ಅದು ಇತಿಹಾಸವನ್ನು ಕಲಿಸುವುದಲ್ಲದೇ ಇತಿಹಾಸದ ಗೂಢಾರ್ಥವನ್ನು ಕಲಿಸಬೇಕು. ಅದು ಓದು ಬರಹ ಕಲಿತ ಅವಿದ್ಯಾವಂತರನ್ನು ಸೃಷ್ಟಿಸಬಾರದು, ಅದು ಮಾನವತೆ, ದೇಶಪ್ರೇಮ, ನಿಃಸ್ವಾರ್ಥತೆಗಳಿಂದ ತುಂಬಿದ ವಿದ್ಯಾವಂತರನ್ನು ಸೃಷ್ಟಿಸಬೇಕು.

ಅಜಯ್ ಬಿ.
L-155, ಎರಡನೆಯ ಹಂತ,ಕುವೆಂಪುನಗರ,ಮೈಸೂರು.

**ಹೌದು**, ಇಂದಿನ ಶಿಕ್ಷಣ ಪದ್ಧತಿಯಲ್ಲಿ ಸ್ವಲ್ಪಮಟ್ಟಿಗೆ ಬದಲಾವಣೆ ಅಗತ್ಯ ಎಂದು ನನ್ನ ಅಭಿಪ್ರಾಯ.

ಮೊದಲನೆಯದಾಗಿ ಒಬ್ಬ ವ್ಯಕ್ತಿಗೆ ಶಿಕ್ಷಣ ಅವನ ಮಾತೃಭಾಷೆಯಲ್ಲಿಯೆ ದೊರೆಯುವಂತಾಗಬೇಕು. ಅದು ವಿಜ್ಞಾನದ ವಿಷಯವೆ ಆಗಿರಲಿ ಅಥವಾ ಕಲಾ, ವಾಣಿಜ್ಯ ವಿಷಯವೆ ಆಗಿರಲಿ ನಾವು ಯಾವುದೇ ವಿಷಯವನ್ನು ಯಾವುದೇ ಭಾಷೆಯಲ್ಲಿ ಓದಿದರೂ, ಅದನ್ನು ಅರ್ಥೈಸಿಕೊಳ್ಳುವುದು, ಚಿಂತಿಸುವುದು ನಮ್ಮ ಮಾತೃಭಾಷೆಯಲ್ಲಿಯೇ ಎಂಬುದನ್ನು ಗಮನಿಸಬೇಕು. ಪ್ರಪಂಚದಲ್ಲಿ ತಾಂತ್ರಿಕವಾಗಿ, ಆರ್ಥಿಕವಾಗಿ ಮುಂದುವರಿದ ರಾಷ್ಟ್ರವಾದ ಜಪಾನಿನಲ್ಲಿ ಅವರು ಮಾತೃಭಾಷೆಗೆ ನೀಡಿರುವ ಪ್ರಾಮುಖ್ಯವನ್ನು ಅರಿಯಬೇಕು. ಅವರ ಪ್ರಕಾರ ಒಬ್ಬ ವ್ಯಕ್ತಿ ಒಂದು ವಿಷಯದಲ್ಲಿ ಪರಿಪಕ್ವನಾಗಬೇಕಾದರೆ ಅದು ಅವನ ಮಾತೃಭಾಷೆಯ ಮೂಲಕ ಮಾತ್ರ ಸಾಧ್ಯ.

ಎರಡನೆಯದಾಗಿ ವಿದ್ಯಾರ್ಥಿಗಳಿಗೆ ತಾತ್ವಿಕ ಶಿಕ್ಷಣ (*theoritical education*)ಕ್ಕಿಂತ ಪ್ರಾಯೋಗಿಕ ಶಿಕ್ಷಣ (*practical education*) ನೀಡುವ ಕಡೆಗೆ ಹೆಚ್ಚು ಗಮನ ನೀಡಬೇಕು. ನಾವು ಒಬ್ಬ ಪ್ರತಿಭಾವಂತ ಆಟೋಮಾಬೈಲ್ ಇಂಜಿನಿಯರಿಂಗ್ ವಿದ್ಯಾರ್ಥಿಯನ್ನು ಗಣನೆಗೆ ತೆಗೆದುಕೊಂಡರೆ ಆತ ಒಂದು ಮೋಟಾರು ಬೈಕಿನ ವಿವಿಧ ಭಾಗಗಳ ಬಗ್ಗೆ ರಚನೆಯ ಬಗ್ಗೆ ಅದರ ಉಪಯೋಗಗಳ ಬಗ್ಗೆ ಸಂಪೂರ್ಣವಾದ ವಿವರವನ್ನು ತಿಳಿಸಬಲ್ಲ. ಆದರೆ ಆ ವಾಹನದ ಭಾಗಗಳನ್ನು ಬೇರ್ಪಡಿಸಿ, ರಿಪೇರಿ ಮಾಡಿ, ಜೋಡಿಸಲು ಅಸಮರ್ಥನಾಗುತ್ತಾನೆ. ಆದರೆ ಇವೆಲ್ಲದರ ಜ್ಞಾನವೇ ಇಲ್ಲದೆ ಗ್ಯಾರೇಜಿನಲ್ಲಿ ಕೆಲಸ ಮಾಡುವ ೧೦-೧೫ ವರ್ಷದ ಹುಡುಗ ಅದನ್ನು ಮಾಡಬಲ್ಲ. ಆದ್ದರಿಂದ ಈ ದಿಸೆಯಲ್ಲಿ ಶೈಕ್ಷಣಿಕ ಪದ್ಧತಿ ತಕ್ಕ ಮಟ್ಟಿಗೆ ಬದಲಾಗಬೇಕು

ಆರ್. ಬಸವರಾಜು, ಪ್ರಥಮ ಬಿ.ಎಸ್ಸಿ.
ಜೆ.ಎಸ್.ಎಸ್. ಕಾಲೇಜು, ಮೈಸೂರು.

ಶಿಕ್ಷಣವೆಂದರೆ ಜನರಿಗೆ ತಿಳಿಯದಿರುವುದನ್ನು ತಿಳಿಸಿಕೊಡುವುದಲ್ಲ, ಅವರ ವರ್ತನೆಯಲ್ಲಿ ಬದಲಾವಣೆಯನ್ನು ಉಂಟುಮಾಡುವುದು.-

ಜಾನ್ ರಸ್ಕಿನ್